ವಿಶಾಖ ಎನ್.

# ‘ನ್ಯಾಷನಲ್ ಕ್ರಷ್’ ಆದ ಸೂಕ್ಷ್ಮಮತಿ

ಮರಾಠಿ ನಟಿ ಗಿರಿಜಾ ಓಕ್ ನೋಡನೋಡುತ್ತಲೇ ‘ನ್ಯಾಷನಲ್ ಕ್ರಷ್’ ಎನಿಸಿಕೊಂಡ ವಿದ್ಯಮಾನವನ್ನು ಇಂಟರ್ನೆಟ್ ಕಳೆದ ಕೆಲವು ದಿನಗಳಲ್ಲಿ ದಾಟಿಸಿತು. ‘ಲಲ್ಲನ್ ಟಾಪ್’ ಎಂಬ ಟಾಕ್ ಶೋನಲ್ಲಿ ಅವರು ಆಡಿದ್ದ ಅತಿ ಸೂಕ್ಷ್ಮ ಮಾತು, ಅವರ ಬಹುಮುಖ ಪ್ರತಿಭೆಯ ದರ್ಶನವು ಓದು ಎಂತಹ ವಿವೇಕ ಕಲಿಸುತ್ತದೆ ಎನ್ನುವುದಕ್ಕೆ ಉದಾಹರಣೆಗಳಂತೆ ಕಂಡವು. ಜೇನಿನಲ್ಲಿ ಅದ್ದಿ ತೆಗೆದಂತೆ ಅವರು ಇಡುತ್ತಿದ್ದ ಪದಗಳು ಮುದಕೊಟ್ಟವು. ಅವರು ತಮ್ಮ ಜೀವನಾನುಭವಗಳನ್ನೇ ಸಣ್ಣ ಪುಟ್ಟ ಕತೆಗಳಂತೆ ಬಣ್ಣಿಸಿದ ರೀತಿಯಂತೂ ಕಾಡುವಷ್ಟು ಸಶಕ್ತ. ಇವಷ್ಟೇ ಅಲ್ಲ, ಅವರು ಆ ಸಂದರ್ಶನ ನಡೆದಾಗ ಉಟ್ಟಿದ್ದ ಮಿರಮಿರ ಮಿಂಚುವ ತೆಳು ನೀಲಿ ಬಣ್ಣದ ಸೀರೆ, ತೊಟ್ಟಿದ್ದ ಬಿಳಿಯ ಸ್ಲೀವ್‌ಲೆಸ್ ಕುಪ್ಪಸ ಕೂಡ ಹೊಗಳಿಕೆಗೆ ಪಾತ್ರವಾದವು.



ಸಾಮಾಜಿಕ ಜಾಲತಾಣದಲ್ಲಿ ತಮ್ಮನ್ನು ‘ನ್ಯಾಷನಲ್ ಕ್ರಷ್’ ಎಂದು ಜನರು ಹೊಗಳಿ ಅಟ್ಟಕ್ಕೆ ಏರಿಸಿದ ಮೇಲೆ, ತಮಗೆ ಆದ ಅನುಭವವನ್ನೂ ಗಿರಿಜಾ ಅಷ್ಟೇ ತಣ್ಣಗೆ ಹಂಚಿಕೊಂಡಿದ್ದಾರೆ.

ಗಂಡ, ಮಗನೊಟ್ಟಿಗೆ ಸುಖವಾಗಿರುವ ಅವರಿಗೆ ಇಂಟರ್ನೆಟ್ ಖ್ಯಾತಿ ಬೇವು, ಬೆಲ್ಲ ಎರಡನ್ನೂ ಕೊಟ್ಟಿದೆ. ಒಬ್ಬ ಯುವಕನು, ‘ಮೇಡಂ... ನೀವು ನನ್ನ ಬೇಬ್ಸ್ ಆಗುವಿರಾ’ ಎಂದು ಕಮೆಂಟ್ ಮೂಲಕ ಪ್ರಶ್ನಿಸಿದ್ದಾನೆ. ಅದನ್ನು ನೋಡಿ ಅವರಿಗೆ ವಿಪರೀತ ನಗು ಬಂತಂತೆ. ‘ಮೇಡಂ’ ಎಂದು ಗೌರವ ಕೊಡುವ ಅವನಿಗೆ ತಾನು ಅವನಿಗೆ ‘ಬೇಬ್ಸ್’ ಆಗಿಯೂ ಒಲಿಯಬೇಕೆಂಬ ಹಂಬಲ ಮೂಡಿರುವುದು ಅಚ್ಚರಿ ತಂದಿದೆ. ಇನ್ನೊಬ್ಬ, ‘ಗಂಟೆಗೆ ಎಷ್ಟು ರೇಟ್’ ಎಂಬ ಅಸಹ್ಯಕರ ಪ್ರಶ್ನೆಯನ್ನೂ ಕೇಳಿದ್ದಾನೆ. ಮಗದೊಬ್ಬ ಯಾರೋ ಕೃತಕ ಬುದ್ಧಿಮತ್ತೆ ಬಳಸಿಕೊಂಡು ಗಿರಿಜಾ ಅವರ ಸೆಕ್ಸಿಸ್ಟ್ ವಿಡಿಯೊ ಸಿದ್ಧಪಡಿಸಿ, ಅಪ್ಲೋಡ್ ಮಾಡಿದ್ದಾನೆ.

‘ನನ್ನ ಮನೆಯ ಎಲ್ಲರೂ ಈ ವಿದ್ಯಮಾನಗಳನ್ನು ಕ್ರೀಡಾಸ್ಫೂರ್ತಿಯಿಂದ ತೆಗೆದುಕೊಂಡಿದ್ದಾರೆ. ಎಲ್ಲರಿಗೂ ಜನಪ್ರಿಯ ಮಾಧ್ಯಮ ಹೇಗೆ ಎನ್ನುವ ಅರಿವು ಇದೆ. ಇವೆಲ್ಲ ಆದಾಗ ಮಗ ಶಾಲಾ ಪ್ರವಾಸದಲ್ಲಿ ಇದ್ದ. ಬಂದಮೇಲೆ, ಅವನು ಎಂಥೆಂಥವೋ ಪ್ರಶ್ನೆಗಳನ್ನು ಕೇಳಿದ. ಇನ್ನು ಮುಂದೆ ತಾನು ಮೊದಲಿಗಿಂತ ಸೂಕ್ಷ್ಮವಾಗಿ ಮಾತಾಡಿಸಬೇಕಾ, ಇನ್ನು ಅಮ್ಮ ಬದಲಾಗಿಬಿಡುತ್ತಾಳಾ ಎಂಬ ಸರಳವೂ ಮುಗ್ಧವೂ ಆದ ಪ್ರಶ್ನೆಗಳೂ ಅವುಗಳಲ್ಲಿ ಇದ್ದವು’ ಎಂದರು.

ಗಿರಿಜಾ ಅವರು ಮಗನಿಗೆ ಕೊಟ್ಟ ಪ್ರತಿಕ್ರಿಯೆಯಂತೂ ಆಸಕ್ತಿಕರವಾಗಿದೆ: ‘ಮಗೂ ಇದೊಂದು ಸಮುದ್ರದ ದೊಡ್ಡ ಅಲೆ ಇದ್ದಹಾಗೆ. ಎದ್ದಾಗ, ಎಲ್ಲೆಲ್ಲೋ ದೊಡ್ಡ ಹಿಮದ ಉಂಡೆಗಳೂ ಚಿಮ್ಮುತ್ತವೆ. ಅವು ನೋಡಲು ದಟ್ಟವಾಗಿ ಕಂಡರೂ ಆಮೇಲೆ ಕರಗಿಹೋಗುತ್ತವೆ. ತಲೆ ಕೆಡಿಸಿಕೊಳ್ಳಬೇಡ’.

ಪುದುಚೇರಿಯಲ್ಲಿ ನೀರಿನಾಟದಲ್ಲಿ ನಿರತರಾಗಿರುವ ಗಿರಿಜಾ ಅವರಿಗೆ ತಾವು ‘ನ್ಯಾಷನಲ್ ಕ್ರಷ್’ ಆದ ನಂತರ ಹೆಚ್ಚೇನೂ ಸಿನಿಮಾ ಆಫರ್‌ಗಳು ಬಂದಿಲ್ಲವಂತೆ. ಸೂಕ್ಷ್ಮಮತಿ ನಟಿಯೊಬ್ಬರು ಹೇಗೆಲ್ಲ ಇರಬೇಕು ಎನ್ನುವುದಕ್ಕೆ ಗಿರಿಜಾ ತಾಜಾ ಉದಾಹರಣೆಯಂತೆ ಕಾಣುತ್ತಿದ್ದಾರೆ. ■

## 150 ಪಟ್ಟು ಲಾಭ ಮಾಡಿದ ಸಿನಿಮಾ

ಈ ವರ್ಷ ಮುಗಿಯುತ್ತಾ ಬಂದಿದೆ. ಹೀಗಿರುವಾಗ, ವರ್ಷದಲ್ಲೇ ಅತಿ ಹೆಚ್ಚು ಲಾಭ ಮಾಡಿದ ಭಾರತೀಯ ಸಿನಿಮಾ ಯಾವುದು ಎಂಬ ಪ್ರಶ್ನೆ ಏಳುತ್ತಿದೆ. ‘ಸೈಯಾರ’, ‘ಛಾವಾ’ ಹಿಂದಿ ಸಿನಿಮಾಗಳು ಪೈಪೋಟಿಯಲ್ಲಿ ಇರಬಹುದೇ ಎಂದೆನಿಸುವುದು ಸಹಜ. ಕನ್ನಡದ ‘ಕಾಂತಾರ ಚಾಪ್ಟರ್ ಒನ್’ ಕೂಡ 800 ಕೋಟಿ ರೂಪಾಯಿ ಗಳಿಕೆಯ ಕ್ಲಬ್ ಸೇರಿದ್ದು, ಅದೂ ರೇಸಿನಲ್ಲಿ ಇದ್ದೀತು ಎಂದುಕೊಳ್ಳುತ್ತೇವೆ.

ವಾಸ್ತವದಲ್ಲಿ ಈ ವರ್ಷ ಅತಿ ಹೆಚ್ಚು ಲಾಭ ಗಳಿಸಿರುವ ಸಿನಿಮಾ ಗುಜರಾತಿ ಭಾಷೆಯದ್ದು. ‘ಲಾಲೂ: ಕೃಷ್ಣ ಸದಾ ಸಹಾಯತೆ’ ಎನ್ನುವುದು ಸಿನಿಮಾ ಶೀರ್ಷಿಕೆ. ಅಂಕಿತ್ ಸಾಖಿಯಾ ನಿರ್ದೇಶನದ ಈ ಭಕ್ತಿ ಪ್ರಧಾನ ಸಿನಿಮಾ ಕೇವಲ ₹50 ಲಕ್ಷ ಬಜೆಟ್‌ನಲ್ಲಿ ತಯಾರಾಗಿತ್ತು. ರೇವಾ ರಚ್, ಶ್ರುಹಾದ್ ಗೋಸ್ವಾಮಿ ಅಭಿನಯದ ಚಿತ್ರವು ₹75 ಕೋಟಿಗೂ ಹೆಚ್ಚು ವಹಿವಾಟು ನಡೆಸಿದೆ. ಅಂದರೆ ಹಾಕಿರುವ ಬಜೆಟ್‌ನ 150 ಪಟ್ಟು ಬಂದಹಾಗೆ ಆಯಿತು. ‘ಛಾವಾ’ ಒಟ್ಟಾರೆ ಬಜೆಟ್‌ನ ಒಂಬತ್ತು ಪಟ್ಟು ಹಾಗೂ ‘ಕಾಂತಾರ ಚಾಪ್ಟರ್ ಒನ್’ ಏಳು ಪಟ್ಟು ಲಾಭವನ್ನು ಮಾಡಿವೆ.

‘ಶೋಲೆ’ ಹಿಂದಿ ಸಿನಿಮಾ 1970ರ ದಶಕದಲ್ಲಿ ಬಂದಾಗ ಐವತ್ತು ವಾರ ಓಡಿ ಸಾಕಷ್ಟು ಸದ್ದು ಮಾಡಿತ್ತು. ಆಗ ಅದಕ್ಕಿಂತ ಹೆಚ್ಚು ಲಾಭ ಮಾಡಿದ್ದು ‘ಜೈ ಸಂತೋಷಿ ಮಾ’ ಎಂಬ ಇನ್ನೊಂದು ಭಕ್ತಿ ಪ್ರಧಾನ ಚಿತ್ರ. ಜನಪ್ರಿಯ ಸಿನಿಮಾ ಸೂತ್ರ ಉಜ್ಜುವವರು ಶತಕೋಟಿ ಬಜೆಟ್ ಕನಸನ್ನು ನನಸು ಮಾಡಿಕೊಳ್ಳುತ್ತಿರುವಾಗ, ಗುಜರಾತಿ ಚಿತ್ರವೊಂದರ ಅದ್ಭುತ ಯಶಸ್ಸು ಇನ್ನೊಂದು ಆಯಾಮಕ್ಕೆ ಕನ್ನಡಿ ಹಿಡಿಯುತ್ತಿದೆ. ■